**SL. No. : EE**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

# CCE PR

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 33-K** **Code No. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 20. 06. 2017 ] [ Date : 20. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here



https://www.karnatakaboard.com/

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** $14 \times 1 = 14$

1. ಜಿಂಕೆಯು ಬೇಡನ ಬಾಣದ ಹೊಡೆತದಿಂದ ತಪ್ಪಿಸಿಕೊಂಡಿದ್ದು ಹೇಗೆ ?
2. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?
3. ಸಾಧನೆಗೆ ಅವಶ್ಯಕವಾದುದು ಯಾವುದು ?
4. ಪುಟ್ಟರಾಜರ ಹುಟ್ಟೂರು ಯಾವುದು ?
5. ಅಜ್ಜ ಅಕ್ಕಿಯನ್ನು ತೆಗೆದುಕೊಂಡು ಹೋದದ್ದು ಹೇಗೆ ?
6. ಗುರುರಾಜ ಕರಜಗಿಯವರ ಅಜ್ಜ ಕಾಯಿದೆ ಮೀರಲು ಕಾರಣವೇನು ?
7. ರೇಷನ್ ಪದ್ಧತಿಯ ಪ್ರಕಾರ ಏನನ್ನು ಮಾಡುವಂತಿರಲಿಲ್ಲ ?
8. ಗೋಪಾಲನು ಹೊಸ ಪಂಚೆಯನ್ನು ಬಯಸಿದ್ದು ಏಕೆ ?
9. ಮುಗ್ಧ ಮಗುವಿನ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು ?
10. ಸಿ.ಪಿ.ಕೆ.ಯವರು ಏನನ್ನು ತೊರೆದು ಮೌನಿಯಾಗು ಎಂದಿದ್ದಾರೆ ?
11. ಹಗಲಿರುಳು ಯಾವುದಕ್ಕೆ ಹೋರಾಡಬೇಕು ?
12. ಮಕ್ಕಳ ಹಸಿವನ್ನು ಬಲ್ಲವರು ಯಾರು ?
13. ಕೆರೆಯನ್ನು ತೋಡಿದ್ದು ಯಾವಾಗ ನಿಷ್ಫಲವಾಗುತ್ತದೆ ?
14. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $15 \times 2 = 30$

15. ಗಿಳಿಯು ಕೇಳಿದ ವರ ಯಾವುದು ?
16. ಟೆಸ್ಟ್ ಪೂರ್ವದ ರಾಹುಲರ ಕ್ರಿಕೆಟ್ ಸಾಧನೆ ಹೇಗಿತ್ತು ?
17. ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರ ಯಾವುದು ? ತಿಳಿಸಿ.
18. ನಾಟಕ ಕ್ಷೇತ್ರಕ್ಕೆ ಪುಟ್ಟರಾಜರ ಕೊಡುಗೆಗಳನ್ನು ತಿಳಿಸಿ.
19. ಪಶ್ಚಿಮ ಘಟ್ಟಗಳು ಯಾವುದರ ಗುಡಾಣವಾಗಿವೆ ?
20. 'ತಪ್ಪಾತರೀ ಸಾಹೇಬರ' ಎಂದು ಅಜ್ಜ ಹೇಳಿದ್ದು ಏಕೆ ?
21. ತಾಯಿಗೆ ಯಾವಾಗ ಬಡತನದ ನೆನಪಾಯಿತು ?



https://www.karnatakaboard.com/

22. ಮಗುವು ಬಾಹುಬಲಿಯನ್ನು ನೋಡಿ ನನ್ನ ಹಾಗೆಯೇ ಎನ್ನಲು ಕಾರಣವೇನು ?

23. "ದೀಪದೆದುರಿಗೆ ತಿಮಿರ ಸರಿಯುವಂತೆ" ಎಂಬುವುದರ ಅರ್ಥವನ್ನು ತಿಳಿಸಿ.

24. 'ಪರಹಿತಕೆ ಬಳಲುವುದೆ ಜೀವನವು' ಹೇಗೆ ?

25. ಕಂದಯ್ಯ ಅತ್ತಾರೆ ಆಗುವ ಅಚ್ಚರಿಗಳಾವುವು ?

26. ಬಸವಣ್ಣನವರು ಕುರುಡು ಸಂಪ್ರದಾಯವನ್ನು ಹೇಗೆ ವಿಮರ್ಶಿಸಿದ್ದಾರೆ ?

27. ಯುದ್ಧವನ್ನು ಮಾಡದೆಯೇ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು ?

28. ಜೋಯಿಸರ ಮಾತು ಯಾವಾಗ ವೇದವಾಕ್ಯವಾಗುತ್ತಿತ್ತು ?

29. 'ಅಯ್ಯೋ, ಕ್ಷಮಿಸಿ' ಎಂದು ಸಾವಿತ್ರಿ ಹೇಳಿದ್ದು ಏಕೆ ?

30. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 3 = 3$

ಕೊರಡ ಕೊನರಿಸಿ ......................................................

...................................................................................

...................................................................................

................................................ ಕಲರವಕೆ ಮತ್ತೇರಿದೆ.

***ಅಥವಾ***

ಯುಗದ ಹಿಂದಿನ ......................................................

...................................................................................

...................................................................................

................................................ ತುಂಬ ಸವಿಚೈತ್ರವು.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** $4 \times 3 = 12$

31. "ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು"

32. ಅವು ಮನಸ್ಸಿನಲ್ಲಿ ಗಸ್ತು ತಿರುಗುತ್ತಿರಬೇಕು.

33. "ನನ್ನ ಇರುವಿಕೆಯ ಅರಿವಾಗುತ್ತದೆ."

34. "ಬಳಲಿದವರಿಗೆಲ್ಲ ಕೈಯ ನೀಡುತಿರುವನು."

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

35. ಬಿ.ಪಿ. ರಾಧಾಕೃಷ್ಣ

36. ಎಂ. ಗೋಪಾಲಕೃಷ್ಣ ಅಡಿಗ



https://www.karnatakaboard.com/

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

37. ಸಹ್ಯಾದ್ರಿ ಸಹನೆ ಕಳೆದುಕೊಳ್ಳಲು ಕಾರಣವೇನು ? ಅದರ ಪರಿಣಾಮವೇನು ? ವಿವರಿಸಿ.

***ಅಥವಾ***

ಪಶ್ಚಿಮ ಘಟ್ಟಗಳ ಪತನದಿಂದ ಪರಿಸರದ ಮೇಲಾಗುವ ಪರಿಣಾಮವನ್ನು ವಿವರಿಸಿ.

38. ಅರ್ಜುನ ಮತ್ತು ಉತ್ತರಕುಮಾರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

***ಅಥವಾ***

ಅರ್ಜುನ ಮತ್ತು ಉತ್ತರಕುಮಾರ ಇವರ ಗುಣಸ್ವಭಾವದಲ್ಲಿಯ ವ್ಯತ್ಯಾಸಗಳನ್ನು ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $12 \times 1 = 12$

39. 'ಬಲಗಡಲು' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಆಗಮ ಸಂಧಿ (ಬಿ) ಆದೇಶ ಸಂಧಿ

(ಸಿ) ಲೋಪ ಸಂಧಿ (ಡಿ) ಗುಣ ಸಂಧಿ

40. 'ಮರದಲ್ಲಿ' — ಈ ಪದದ ವಿಭಕ್ತಿ

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ಷಷ್ಠೀ (ಡಿ) ಸಪ್ತಮೀ

41. 'ನಡೆನಡೆ' ಎಂಬುದು ಇದಕ್ಕೆ ಉದಾಹರಣೆ

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

42. 'ಬನ' — ಈ ಪದದ ತತ್ಸಮ ರೂಪ

(ಎ) ಭಣ (ಬಿ) ನಭ

(ಸಿ) ಕಾನನ (ಡಿ) ವನ



https://www.karnatakaboard.com/

43. 'ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು' — ಈ ವಾಕ್ಯದಲ್ಲಿ ಸಮಾನಧರ್ಮ

(ಎ) ಕರ್ಪೂರ (ಬಿ) ಮೌನ

(ಸಿ) ತಟ್ಟೆಯೊಳು (ಡಿ) ಕರಗುವೊಲು

44. 'ತತ್ಪುರುಷ' ಸಮಾಸಕ್ಕೆ ಸೂಕ್ತ ಉದಾಹರಣೆ ಇದಾಗಿದೆ

(ಎ) ಅರಮನೆ (ಬಿ) ಕೆಂದಾವರೆ

(ಸಿ) ಗಿಡಮರಬಳ್ಳಿಗಳು (ಡಿ) ಇಕ್ಕೆಡೆ

45. ಷಟ್ಪದಿ ಪದ್ಯದಲ್ಲಿರುವ ಸಾಲುಗಳ ಸಂಖ್ಯೆ

(ಎ) ನಾಲ್ಕು (ಬಿ) ಐದು

(ಸಿ) ಆರು (ಡಿ) ಮೂರು

46. 'ಮಾನ' — ಈ ಪದದ ವಿರುದ್ಧಾರ್ಥಕ ಪದ

(ಎ) ಸಂಮಾನ (ಬಿ) ಅವಮಾನ

(ಸಿ) ಘನಮಾನ (ಡಿ) ಅಭಿಮಾನ

47. 'ಮನಶ್ಯಾ' ಪದದ ಗ್ರಾಂಥಿಕ ರೂಪ

(ಎ) ಮಣಸ್ಯಾ (ಬಿ) ಮನಸು

(ಸಿ) ಮಾನುಶ (ಡಿ) ಮನುಷ್ಯ

48. ನಾಮಪದದ ಮೂಲರೂಪವನ್ನು ಹೀಗೆ ಕರೆಯುತ್ತಾರೆ

(ಎ) ನಾಮಪ್ರಕೃತಿ (ಬಿ) ಕ್ರಿಯಾಪ್ರಕೃತಿ

(ಸಿ) ಪ್ರತ್ಯಯ (ಡಿ) ಧಾತು

49. 'ಮೋಹರ' — ಈ ಪದದ ಅರ್ಥ

(ಎ) ಸೈನ್ಯ (ಬಿ) ಶಿವ

(ಸಿ) ಭೂಮಿ (ಡಿ) ತಲೆ

50. ಬಹುವಚನ ರೂಪದಲ್ಲಿರುವ ನಾಮಪದ ಇದು

(ಎ) ಮನೆಗಳು (ಬಿ) ತಾಯಿ

(ಸಿ) ತಂದೆ (ಡಿ) ಗುಡಿ



https://www.karnatakaboard.com/

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ಮನಸ್ಸು ರೋಗವನ್ನು ಸೃಷ್ಟಿಸಬಲ್ಲದು, ಗುಣಪಡಿಸಬಲದು. ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾಬುದ್ಧಿ ಇವೇ ಮೊದಲಾದ ರಚನಾತ್ಮಕ ಭಾವನೆಗಳು ದೇಹಯಂತ್ರದ ಎಲ್ಲಾ ಭಾಗಗಳಲ್ಲಿ ಉತ್ಸಾಹಯುತ, ಆರೋಗ್ಯಯುತ ಚಟುವಟಿಕೆಗಳಿಗೆ ಕಾರಣವಾಗುತ್ತದೆ. ನಮ್ಮಲ್ಲಿ ಸಂತೋಷ, ತೃಪ್ತಿ ಹಾಗೂ ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತದೆ. ಹಾಗೆಯೇ ನಿಷೇಧಮಯ ಭಾವನೆಗಳಾದ ಭಯ, ಚಿಂತೆ, ದ್ವೇಷ, ಅಸೂಯೆ. ಸೋಲಿನ ಮನೋಭಾವನೆ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡಕನ್ನುಂಟು ಮಾಡಿ ರೋಗಕ್ಕೆ ಕಾರಣವಾಗುತ್ತವೆ. ಪ್ರಸನ್ನತೆ, ಶಾಂತತೆ, ಧೈರ್ಯ, ಆತ್ಮವಿಶ್ವಾಸ, ದೃಢನಿಶ್ಚಯ ಇವೇ ಮೊದಲಾದ ಭಾವನೆಗಳು ಶರೀರದ ಸುಸ್ಥಿತಿಗೆ ಆರೋಗ್ಯವರ್ಧಕ ಟಾನಿಕ್ಕಿಗಿಂತಲೂ ಹೆಚ್ಚಿನ ಸಹಾಯ ಮಾಡುತ್ತವೆ.

ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನು ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು. ಮನಸ್ಸು ಕೆಲಸ ಮಾಡುವ ಸೂಕ್ಷ್ಮ ನಿಯಮವನ್ನು ತಿಳಿದುಕೊಂಡರೆ, ಶ್ರದ್ಧೆಯಿಂದ ಶ್ರಮಿಸಿದರೆ ವಿಷವನ್ನೂ ಅಮೃತವನ್ನಾಗಿಸಬಹುದು.

*ಪ್ರಶ್ನೆಗಳು :*

51. ರಚನಾತ್ಮಕ ಭಾವನೆಗಳಾವುವು ?

52. ಮನಸ್ಸು ಯಾವ ಚಟುವಟಿಕೆಗಳಿಗೆ ಕಾರಣವಾಗುತ್ತದೆ ?

53. ನಿಷೇಧಮಯ ಭಾವನೆಗಳಾವುವು ?

54. ಶರೀರದ ಸುಸ್ಥಿತಿಗೆ ಕಾರಣವಾಗುವ ಅಂಶಗಳಾವುವು ?

55. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಕೈಕೆಸರಾದರೆ ಬಾಯಿ ಮೊಸರು
* ತಾ ಕಳ್ಳ ಪರರ ನಂಬ
* ಹಾಸಿಗೆಯಿದ್ದಷ್ಟು ಕಾಲುಚಾಚು



https://www.karnatakaboard.com/

56. ನಿಮ್ಮನ್ನು ಬಳ್ಳಾರಿಯ ಕುವೆಂಪು ನಗರದ ಸರ್ಕಾರಿ ಪ್ರೌಢಶಾಲೆಯ 'ಅರುಣ' ಎಂದು ಭಾವಿಸಿಕೊಂಡು, ಪರೀಕ್ಷಾ ಸಿದ್ಧತೆಯನ್ನು ಕುರಿತು ಬೆಂಗಳೂರಿನ ಜಯನಗರದಲ್ಲಿ ವಾಸವಾಗಿರುವ 'ರಾಜು' ಎಂಬ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ. $1 \times 4 = 4$

*ಅಥವಾ*

ನಿಮ್ಮನ್ನು ಬೆಂಗಳೂರಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯ 'ಅಯೇಷ' ಎಂದು ಭಾವಿಸಿಕೊಂಡು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ದಾಖಲಾಗಲು ಅಗತ್ಯವಾದ ವರ್ಗಾವಣೆ ಪತ್ರವನ್ನು ನೀಡುವಂತೆ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರವೊಂದನ್ನು ಬರೆಯಿರಿ.

57. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಪ್ರಜಾಪ್ರಭುತ್ವದಲ್ಲಿ ಮತದಾರರ ಪಾತ್ರ
* ನಿರುದ್ಯೋಗ ಸಮಸ್ಯೆ
* ಜಲಮಾಲಿನ್ಯಕ್ಕೆ ಕಾರಣಗಳು ಮತ್ತು ನಿವಾರಣೋಪಾಯಗಳು



https://www.karnatakaboard.com/

https://www.karnatakaboard.com/